# ದಿವಾಕರ ಬಲ್ಲಾಳರ ‘ಸವೆದ ಹಾದಿಯ ಪಯಣ’: ಗಡಿನಾಡ ಪ್ರತಿಭೆಯ ಕನ್ನಡ ಪ್ರಜ್ಞೆಯ ದ್ಯೋತಕ.

**ಆನಂದ ಎಂ ಕಿದೂರು**

ಕನ್ನಡ ಉಪನ್ಯಾಸಕ, ಮಂಗಳೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜು, ಹಂಪನಕಟ್ಟೆ.

**Received: 01/02/2025 ; Accepted: 15/02/2025 ; Published: 03/03/2025**

**DOI: https://doi.org/10.5281/zenodo.14961362**

## ABSTRACT:

ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ ಬಹುಭಾಷಾ ಸಂಗಮ ಭೂಮಿ. ತುಳು, ಕನ್ನಡ, ಕೊಂಕಣಿ, ಮರಾಠಿ, ಮಲೆಯಾಳ, ಬ್ಯಾರಿ, ಮಾವಿಲತುಳು, ಹವ್ಯಕ, ಕರಾಡ ಮುಂತಾದ ಅನೇಕ ಭಾಷೆಗಳನ್ನಾಡುವ ಜನರಿದ್ದಾರೆ. ಆದರೆ ಇವರ ಓದಿನ ಭಾಷೆ ಕನ್ನಡ. ಆದ್ದರಿಂದ ಇವರು ಕನ್ನಡ ತಾಯಿಯ ಮಕ್ಕಳು. ಕನ್ನಡ ಭಾಷೆ, ಆಚಾರ, ವಿಚಾರ, ಸಂಸ್ಕೃತಿಗಳಿಗೆ ಹೊಂದಿಕೊಂಡು ಕಾಸರಗೋಡಿನಲ್ಲಿ ತಲೆತಲಾಂತರದಿಂದ ಬಾಳಿ ಬದುಕುತ್ತಾ ಬಂದಿದ್ದಾರೆ. ಇಲ್ಲಿ ಕನ್ನಡ ಮತ್ತು ತುಳು ಭಾಷೆಗಳು ಒಂದೇ ನಾಣ್ಯದ ಎರಡು ಮುಖಗಳಂತಿವೆ.

ದಿವಾಕರ ಬಲ್ಲಾಳ್ ಎ. ಬಿ. ಗಡಿನಾಡ ಕನ್ನಡಿಗ. ಕೇರಳ ರಾಜ್ಯದ ಮಂಜೇಶ್ವರ ತಾಲೂಕು ಕುಂಜತ್ತೂರಿನ ಸರಕಾರಿ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕ. ವಿದ್ಯಾರ್ಥಿ ಜೀವನದಿಂದಲೇ ನಾಟ್ಯ, ನಾಟಕ, ಗಮಕ, ಗಾಯನ, ಯಕ್ಷಗಾನಗಳಲ್ಲಿ ತೊಡಗಿಸಿಕೊಂಡ ಬಹುಮುಖ ಪ್ರತಿಭೆ. ಇದರ ಜೊತೆಗೆ ಕವನ ಬರೆದು ಒಡಲಿನ ಸಾಹಿತ್ಯದ ಹಸಿವನ್ನು ನೀಗಿಸಿಕೊಂಡು ತೃಪ್ತಿ ಪಡೆಯುವ ಭಾವಜೀವಿ, ಯುವಕವಿ.

ಇದು ಹೊಗಳಿಕೆಯ ಮಾತಲ್ಲ. ತನ್ನೊಳಗಿನ ಭಾವ ತೀವ್ರತೆಯನ್ನು ಪ್ರಕಟಪಡಿಸಿದ ‘ಸವೆದ ಹಾದಿಯ ಪಯಣ’ ಕವನ ಸಂಕಲನ ಇದಕ್ಕೆ ಸಾಕ್ಷಿ.

## KEYWORDS:

ಅಧ್ಯಾತ್ಮ, ರಾಷ್ಟ್ರೀಯತೆ, ನಾಡು-ನುಡಿ, ಪ್ರಜಾಪ್ರಭುತ್ವ, ನೀತಿಸೂಕ್ತ, ಕರ್ತವ್ಯಪ್ರಜ್ಞೆ.

‘ಸವೆದ ಹಾದಿಯ ಪಯಣ’ ಕವನ ಸಂಕಲನದ ಹೆಚ್ಚಿನ ಕವಿತೆಗಳು ಗೇಯ ತಪ್ಪದ, ಸರಳ ಧಾಟಿಯ, ಓದಿನ ಓಘಕ್ಕೆ ದೊರಕುವ ಮಧುರ ಭಾವದ ರಚನೆಗಳು. ಕೃತಿಯ ಆರಂಭದ ಕವಿತೆಗಳು ಭಕ್ತಿಪ್ರಧಾನ ಕೀರ್ತನೆಗಳಂತಿವೆ. ಶಾರದೆ ಮತ್ತು ಸರಸ್ವತಿಯರ ಸ್ತುತಿ ಭಕ್ತಿಪರಂಪರೆಯಲ್ಲಿ ಬರುವ ನವವಿಧ ಭಕ್ತಿಯಲ್ಲಿ ಎರಡನೆಯ

'ಕೀರ್ತನಂ' ಪ್ರಕಾರವನ್ನು ಹೋಲುತ್ತವೆ.

ಕವಿಯ ಮನದಲ್ಲಿ ಆಶಾವಾದ ಮನೆಮಾಡಿದೆ. ಕವಿದ ಕತ್ತಲೆ ಕಳೆದು ಬೆಳಕು ಹರಿಯುವ ಭರವಸೆ ಕವನದಲ್ಲಿದೆ. ಅಜ್ಞಾನದ ಅಂಧಕಾರವನ್ನು ತೊಲಗಿಸಿ ಸುಜ್ಞಾನದ ದೀವಿಗೆ ಬೆಳಗುವ ದಿನಗಳು ಬಹುದೂರವಿಲ್ಲ ಎನ್ನುವ ಆಶಯ 'ಬಂದೇ ಬರುತ್ತಾನೆ'(ಸವೆದ ಹಾದಿಯ ಪಯಣ; ಪು. 10) ಕವಿತೆಯಲ್ಲಿ ಅಡಗಿದೆ.

ಬದುಕಿನಲ್ಲಿ ಚಿಗುರೊಡೆಯುವ ನಿರಸನ ಭಾವ 'ಇರಲಿಲ್ಲದಿರಲಿ'(ಅದೇ; ಪು. 12) ಕವಿತೆಯಲ್ಲಿ ಒಡಮೂಡಿದೆ. ಏನು ಇರಬೇಕು ಯಾವುದು ಇರಬಾರದು ಎನ್ನುವುದನ್ನು ಕವಿ ನೀತಿಯುಕ್ತವಾಗಿ ಪ್ರತಿಪಾದಿಸಿದ್ದಾರೆ. ಅರಿಷಡ್ವರ್ಗಗಳು–ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಹೋಗಲಾಡಿಸಿ ಸತ್ಕರ್ಮಗಳನ್ನು ಪೋಷಿಸುವಂತೆ ಕವಿಯ ಕರೆಯಿದೆ.

ಪ್ರಬಲ ರಾಷ್ಟ್ರೀಯತೆಯ ಪ್ರತಿಪಾದನೆ 'ಜ್ಞಾನತಾಣ'(ಪು. 18), 'ಕ್ರಾಂತಿವೀರ ಭಗತ್ ಸಿಂಗರ ಲಾವಣಿ'(ಪು. 39), 'ದುರ್ಗದ ಹಿರಿಮೆ'(ಪು. 42), 'ಭಾರತಿಗಾರತಿ'(ಪು. 58) ಕವಿತೆಗಳಲ್ಲಿದೆ. ಸನಾತನ ಪರಂಪರೆಯ ಸ್ಮರಣೆಯನ್ನು ಕವಿ ಪದಗಳಲ್ಲಿ ಬಣ್ಣಿಸಿದ್ದಾರೆ. ಭರತಭೂಮಿಯ ಸಾಂಸ್ಕೃತಿಕ ಚಹರೆಯನ್ನು ದಾಖಲಿಸುತ್ತಾ 'ವಸುದೈವ ಕುಟುಂಬಕಂ' ಆಶಯವನ್ನು ಸಾಕಾರಗೊಳಿಸುವ ಪ್ರಯತ್ನವಿದೆ. ಸಂತ ಶ್ರೇಷ್ಠರ, ಕ್ರಾಂತಿಪುರುಷರ ಮಹಿಮೆ ಪ್ರಸ್ತಾಪಗೊಂಡಿದೆ.

ನಾಡು–ನುಡಿ ಸಂರಕ್ಷಣೆಯ ಭಿನ್ನಪ 'ಜಾತಿ ಹಾವು'(ಪು. 19) ಕವಿತೆಯಲ್ಲಿದೆ. ಕನ್ನಡ ಭಾಷಾ ಬಾಹುಳ್ಯದ ಗಡಿನಾಡು, ರಾಜ್ಯ ಭಾಷೆಯ ಹೇರಿಕೆಯಿಂದ ಪಡುವ ಬೇಗುದಿಯನ್ನು ಕವಿ ಚಿತ್ರಿಸಿದ್ದಾರೆ. ಮಾತೃಭಾಷೆಯ ಉಳಿಯುವಿಕೆಗೆ ಭಾಷಾಭಿಮಾನಿಗಳು ಐಕ್ಯರಾಗಬೇಕಾದ ಅನಿವಾರ್ಯತೆಯ ನಿವೇದನೆ ಇದರಲ್ಲಿದೆ. 'ಕಸ್ತೂರಿ ಕನ್ನಡ'(ಪು. 20) ಕವನ ಕನ್ನಡ ಭಾಷೆಯ ಸೊಬಗು ಸೊಗಡುಗಳ ಬಣ್ಣನೆಯನ್ನೊಳಗೊಂಡಿದೆ. ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಕೊಡುಗೆ ನೀಡಿದ ಕವಿ ಪರಂಪರೆಯ ಪರಿಚಯ ಈ ರಚನೆಯಲ್ಲಿದೆ.

ಆಳಿಕೆಯ ಅವ್ಯವಸ್ಥೆ ಕವಿಯನ್ನು ಕಾಡಿದ ಬಗೆ 'ಪ್ರಜಾ ಪ್ರಭುತ್ವ'(ಪು. 24) ಕವನದಲ್ಲಿದೆ. ಬದುಕಿನ ರಕ್ಷಣೆಯ ಮರೀಚಿಕೆ ಭಾವ 'ರಕ್ಷಣೆಯಿಲ್ಲದ(ಅ) ರಕ್ಷಕರು'(ಪು. 32) ಕವಿತೆಯಲ್ಲಿದೆ.

**ಪ್ರಜೆಗಳಿಂದ ಪ್ರಜೆಗಳು ಪ್ರಜೆಗಳಿಗೋಸ್ಕರ ಭಾರತ**
**ಸ್ಪಷ್ಟವಾಗಲೇ ಇಲ್ಲ ನನಗಿದುವರೆಗೀ ವಚನದರ್ಥ**
**ಪ್ರಬಲರೇ ಪ್ರಭುಗಳೆಂಬುವುದು ಇತಿಹಾಸದ ಸತ್ಯ**

ಸಾಮಾನ್ಯರೆಲ್ಲ ಪ್ರಭುಗಳಾಗರು ಅರಿತಿರುವ ಮಿಥ್ಯ. (ಪ್ರಜಾ ಪ್ರಭುತ್ವ ).

.... ಕೆಲ ಮೇಲಧಿಕಾರಿಗಳು
ಕುರ್ಚಿಗೆ ಖರ್ಚುಮಾಡಿ ಗೆದ್ದವರ ಭರ್ಚಿ ಮಾತುಗಳು
ಎದೆಗೆ ಚುಚ್ಚುವಾಗ ಸ್ವಾಭಿಮಾನದ ಕಟ್ಟೆಯೊಡೆದು
ಅಂತರಂಗದ ದಾವಾನಲದಿಂದ ಸುಡಬೇಕೆನಿಸುತ್ತದೆ
ದೇಹ ಮಾಂಸಕ್ಕೆ ಹಂಬಲಿಸುವ ಮತ ಧರ್ಮಗಳ ಹೆಸರಲ್ಲಿ
ಪಾಶವೀವೃತ್ತಿ ಗೈವ ಪಿಪಾಸುಗಳ ವಿಕೃತಾಟ್ಟಹಾಸ
ಭಯಗೊಳಿಸಿದರೂ ನಾವು ಹೋಗಲೇಬೇಕು
ರಕ್ಷಣೆಯಿಲ್ಲದ(ಆ)ರಕ್ಷಕರಂತೆ!. (‘ರಕ್ಷಣೆಯಿಲ್ಲದ(ಆ)ರಕ್ಷಕರು’).

ಪ್ರಜಾತಂತ್ರದ ದುರ್ವ್ಯವಸ್ಥೆಯನ್ನು ವಿಡಂಬಿಸುವ ಮತ್ತೊಂದು ಕವನ ‘ಬೆಕ್ಕಿನಾಟ’(ಪು. 60). ವಾಸ್ತವಿಕ ಘಟನೆಗಳನ್ನು ಮುನ್ನಲೆಯಾಗಿಟ್ಟು ರಚನೆಯಾದ ಕವಿತೆ ಇದು.

ಅಮಿತ ಆಮಿಷದ ಬಲೆಯ ಬೀಸಿದರು
ನೋಟು ಹಂಚುತ ಓಟು ಪಡೆದರು
ಮತದ ಮೌಲ್ಯಕೆ ಬೆಲೆಯ ತೆತ್ತರು
ವಚನ ಧೂಮದಲಿ ಕಾಣೆಯಾದರು.

ಚುನಾವಣೆಯ ಮೊದಲು ಹೇಗೆ? ಆನಂತರ ಏನು? ಎನ್ನುವುದನ್ನು ಮೇಲಿನ ಸಾಲುಗಳು ಅತ್ಯಂತ ಮಾರ್ಮಿಕವಾಗಿ ವಿವರಿಸುತ್ತದೆ.

ತೆರಿಗೆ ಬೈರಗಿಲಿ ಬದುಕ ಕೊರೆದರು
ನಾಟಕವಾಡಿ ಮೋಡಿ ಮಾಡಿದರು
ಒಂದು ಬೊಗಸೆಯಲಿ ತುಂಬಿ ಕೊಟ್ಟರು
ಎರಡು ಕೈಯಲೂ ಬಾಚಿಕೊಂಡರು

ಹಳಿಯೇ ಇಲ್ಲದೆ ರೈಲು ಬಿಟ್ಟರು
ಗದ್ದುಗೆಯೇರೆ ಜನರ ಮರೆತರು
ತನ್ನ ಬೊಕ್ಕಸವ ತುಂಬಿ ಕೊಂಡರು
ನಾಡಿನುದ್ಧಾರಕೆ ಕೊಡಲಿಯಿಟ್ಟರು.

ಅಧಿಕಾರದ ಗದ್ದುಗೆ ಪ್ರಾಪ್ತವಾದ ಮೇಲೆ ಜನನಾಯಕರ ನಿಜ ಗುಣವನ್ನು ಬಯಲು ಮಾಡುವ ಈ ಗೆರೆಗಳು ಮುಗ್ಧ ಪ್ರಜೆಗಳ ಔದಾರ್ಯದ ಮನಸ್ಸಿಗೆ ಕವಿ

ಮರುಗುವುದನ್ನು ಕಾಣಬಹುದು. ಕವಿಯ ಸಾಮಾಜಿಕ ಪ್ರಜ್ಞೆ ಇಲ್ಲಿ ಜನಜಾಗೃತಿಯ ರೂಪಕವಾಗಿ ಈ ಕವಿತೆ ಮೂಡಿಬಂದಿದೆ.

ಯಾವ ಕವಿಯಲ್ಲಿ ಪ್ರಭುತ್ವದ ಬಗೆಗಿನ ಭಿನ್ನ ಧೋರಣೆ ಇದೆಯೋ ಅದೇ ಕವಿಯ ಕವನವೊಂದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಜ್ಞಾವಂತರಾಗಿ ಮತ ಚಲಾಯಿಸಿರಿ ಎನ್ನುವ ಭಿನ್ನಹವನ್ನೂ ಹೊಂದಿದೆ. 'ನನ್ನ ಹಕ್ಕು'(ಪು. 67) ಕವಿತೆಯ ಆರಂಭದಲ್ಲಿ "ನನ್ನ ಓಟು ನನ್ನ ಹಕ್ಕು, ಯಾರಿಗದನು ಹಾಕಬೇಕು; ಎಂದು ಮೊದಲು ಯೋಚನೆಯ ಮಾಡಬೇಕು" ಎಂಬೀ ಮಾರ್ಗದರ್ಶೀ ಮಾತುಗಳನ್ನು ಗಮನಿಸಬಹುದು.

ಮನುಷ್ಯನ ಗುಣ ವಿವೇಕವನ್ನು ಪ್ರಶ್ನಿಸುವ, ಭಕ್ತಿ ಭಾವಗಳನ್ನು ಪ್ರಕಟಿಸುವ ರಚನೆ 'ನಶ್ವರ'(ಪು. 14), 'ಮಾಡಿ ಫಲವೇನು?'(ಪು. 25), 'ಒಳಗಿರುವವನು'(ಪು. 36), 'ಬಾ ಪಲ್ಲಕಿಯನೇರು'(ಪು. 53), 'ಎಂದು ಬರುವೆ ಬೃಂದಾವನಕೆ?'(ಪು. 56) ಮುಂತಾದ ಕವಿತೆಗಳಲ್ಲಿದೆ. ಭಕ್ತಿ ಪರಂಪರೆಯ ಕನಕದಾಸ ಮತ್ತು ಪುರಂದರದಾಸರ ಧಾಟಿಯನ್ನು ಹೋಲುವ ರಚನೆಗಳಿವು. ನಾನು ಎಂಬ ಆಹಂ ಭಾವ, ಹೆತ್ತವರನ್ನು ಒಲ್ಲದೇ ಬೀಗುವ, ಸಿರಿ ಸಂಪತ್ತಿನ ಮದದಲ್ಲಿ ಮೆರೆಯುವ, ಬಂಧು ಬಾಂಧವರನ್ನು ತೊರೆದು, ಸತಿ-ಸುತರು ಎನಗೆ ಹಿತರೆಂದು ಬಗೆಯುವ ದಾರ್ಷ್ಟ್ಯ ಗುಣದ ಮನುಜನಿಗೆ ಆತ್ಮ ಪ್ರಜ್ಞೆಯನ್ನು ಬೆಳಗಿಸಿ ಸಾತ್ವಿಕ ನಡೆಯನ್ನು ಅಳವಡಿಸುವ ಸೂಚನೆಯ ಇಂಗಿತ ಈ ಕವಿತೆಗಳಲ್ಲಿದೆ.

**ತಾಯ್ತಂದೆಯರ ಸಲಹದ ಮಕ್ಕಳು**
**ನೂರಾರು ದೇಗುಲ ಸುತ್ತಿದರೇನು?**
**ಸದ್ವಿವೇಕ ಸದ್ಗುಣಗಳು ಇಲ್ಲದೆ**
**ದಾನ ಧರ್ಮವ ಮಾಡಿದರೇನು?**

**ಬಡವನೊಡಲನು ತಣಿಸದ ಮನುಜನು**
**ಅನ್ನದಾನವನು ಮಾಡಿದರೇನು?**
**ಅಂತರಂಗದಿ ಕೊಳೆಯನು ತುಂಬಿ**
**ನಿತ್ಯವು ಪೂಜೆಯ ಮಾಡಿದರೇನು?**

**ಕಷ್ಟಕಾಲದಲಿ ದೊರೆಯದೆ ಇರುವ**
**ಬಂಧು ಬಳಗ ನಮಗಿದ್ದರೇನು?**
**ನಾರಿಗೆ ಗೌರವ ನೀಡದೆ ನೀವು**

**ನಾಲಗೆಯನು ಹರಿ ಹಾಯುವಿರೇನು? (ಮಾಡಿ ಫಲವೇನು; ಪು. 25)**

ಈ ರಚನೆ ಕನಕದಾಸರ ಕೆಲವು ಕೀರ್ತನೆಗಳ ಆಶಯಗಳನ್ನು ಪ್ರತಿನಿಧಿಸಿದೆ.

ಪುರಂದರದಾಸರ 'ಉದರ ವೈರಾಗ್ಯವಿದು' ಕೀರ್ತನೆಯ ಭಾವವನ್ನು ನೆನಪಿಗೆ ತರುವ ಕವನ 'ಕಾಲ ಕಸಿದ ಬಾಳ ತಾಳ(ಪು. 61).

**ರಂಗದಲ್ಲೇ ಹಗಲುವೇಷ ಮೋಸ ಮಾಡಿದೆ**
**ಬಂಧಗಳು ಕೊಂಡಿ ಕಳಚಿ ತಿಪ್ಪೆ ಸೇರಿದೆ**
**ಜಾತ್ರೆಯಲಿ ಕೆಲಮುಖಗಳು ಕಾಣೆಯಾಗಿದೆ**
**ಜಗದ ನಿಯಮ ಹಳಿಯ ಬಿಟ್ಟು ಚಲಿಸದಾಗಿದೆ.**

ಬಣ್ಣದ ಮಾತು, ಭರವಸೆಯ ನುಡಿ, ವಂಚನೆಯ ದಾರಿ ಇವೆಲ್ಲಾವನು ಕರಗತಮಾಡಿಕೊಂಡು ಬಾಳುವ ಮನುಜನ ಗುಣ ಸ್ವಭಾವಗಳನ್ನು ಈ ಕವನ ಪ್ರತಿನಿಧಿಸಿದೆ.

ಕವಿತೆ ಹುಟ್ಟುವ ಪರಿಯನ್ನು 'ಕವಿತೆಯರಳುವ ಸಮಯ'(ಪು. 26) ಕವನದಲ್ಲಿ ಕಾಣಬಹುದು. ಅನುಭವದ ಅಭಿವ್ಯಕ್ತಿಯ ಮೂರ್ತರೂಪ ಇಲ್ಲಿ ವ್ಯಕ್ತವಾಗಿದೆ. ಕವಿಯ ಮಾತಿನಲ್ಲಿ ಹೇಳುವುದಾದರೆ "ಅನುಭವಕೆ ಬರುವುದು ಮನದ ಭಾರವಿಳಿದು ಹಗುರವಾಗುವುದು".(ಅದೇ) ಕವಿ ಮನಸ್ಸು ಧ್ಯಾನಸ್ಥಗೊಂಡಾಗ ಒಳಗಿನ ಅಂತಃಕರಣ ಊರ್ಧ್ವಮುಖವಾಗಿ ನಭವನ್ನು ಹೊಕ್ಕಾಗ

**ಚಿಂತೆಯಲಿ ಮುಳುಗಿ ಆಗಸವ ನೋಡುತಿರೆ**
**ಕಿವಿದೆರೆಗೆ ಅಪ್ಪಳಿಸುತ್ತಿತ್ತು ಪ್ರಕೃತಿಯ ನಿನಾದ**
**ಹಕ್ಕಿಗಳ ಚಿಲಿಪಿಲಿ ಒಡಲಬೇಗೆಯ ಕಳೆಯೆ**
**ಬಂದ ತಂಗಾಳಿ ಅಂಗಳದ ರಂಗೋಲಿ**
**ತಿಂಗಳು ಬೆಳದಿಂಗಳು ಮರ ಗಿಡಗಳು**

**ಮತ್ತೆ ಲೇಖನಿಯತ್ತ ಕಣ್ಣಾಯಿಸಿದೆ**
**ಶಿವಧನುಸ್ಸನೆತ್ತಿದೆ ವೀರ ರಾಮನಂತೆ**
**ಏಕಾಗ್ರಚಿತ್ತನಾಗಿ ನನ್ನನೇ ಮರೆತವನಾಗಿ**
**ಶಿವಜಟೆಯ ಗಂಗೆಯಂತೆ ಭಾವನೆಗಳು**
**ಹರಿಯಲಾರಂಭಿಸಿತು ಕೊನೆಯಿಲ್ಲದೆ.**

ಎನ್ನುವಲ್ಲಿ ಭಾವಧಾರೆಯ ಹರಿವಿನ ಪರಿಯ ಚಿತ್ರಣವಿದೆ. ಕವಿಗೆ ಕವನ ಹುಟ್ಟುವ ಸಮಯ ಕೈಗೆತ್ತಿಕೊಂಡ ಲೇಖನಿ ಶಿವನ ಬಿಲ್ಲಿನಂತೆ, ಮನಸ್ಸಿನ ಭಾವನೆಗಳು ಶಿವನ ಜಡೆಯಿಂದ ಹರಿಯುವ ಗಂಗೆಯಂತೆ ಕಂಡು ಬರುತ್ತದೆ.

'ಕಾಯಕ ಯಜ್ಞ'(ಪು. 28) ಕವನ "ಕರ್ಮಣ್ಯೇವಾಧಿಕಾರಸ್ತೆ ಮಾ ಫಲೇಷು ಕದಾಚನ" ಎಂಬ ಶ್ರೀಕೃಷ್ಣ ಪರಮಾತ್ಮನ ನುಡಿಯ ವಿವರಣೆಯನ್ನು ಒಳಗೊಂಡಿದೆ. ಹನ್ನೆರಡನೇ ಶತಮಾನದ ವಚನ ಸಾಹಿತ್ಯದ ಶರಣರ "ಕಾಯಕವೇ ಕೈಲಾಸ" ನಾಣ್ನುಡಿಯ ಆಶಯ ಸ್ಫುರಿಸುತ್ತದೆ. ಜನಸೇವೆಯ ಮೂಲಕ ಜನಾರ್ಧನನ ಕೃಪೆಯನ್ನು ಪಡೆಯುವ ಮಾರ್ಗವನ್ನು ಸೂಚಿಸಿಕೊಡುತ್ತದೆ.

'ಉಷೆಯಾಗಮನ'(ಪು. 30) ಕವಿತೆ ಸೂರ್ಯೋದಯದ ಬಣ್ಣನೆಯಾಗಿದೆ. ಕನ್ನಡ ಸಾಹಿತ್ಯದ ನವೋದಯ ಪ್ರಕಾರದ ಛಾಯೆ ಈ ರಚನೆಯ ಹಿಂದಿದೆ. ಕವಿಯ ಹೊಸ ಭಾವನೆ ಪರಿಣಾಮಕಾರಿಯಾಗಿ ಚಿಗುರೊಡೆದಿದೆ. ಉಪಮೆ, ವರ್ಣನೆ, ಭಾಷೆಯ ಬಳಕೆ ಮನೋಜ್ಞವಾಗಿದೆ.

ಆರ್ದ್ರ ಭಾವದ ನಿಲುವು 'ಕಾವಳ' (ಪು. 31) ಕವನದಲ್ಲಿ ಕಾಣಬಹುದು. ಕವಿಯ ಯಾವುದೋ ಬೇಡಿಕೆ ಕೈಗೂಡದ ಹತಾಶೆ ಮನೆಮಾಡಿದೆ. ಪಂಚ ಭೂತಗಳು; ಭೂಮಿ, ಗಾಳಿ, ನೀರು, ವಾಯು, ಆಕಾಶ; ಪಂಚೇಂದ್ರೀಯಗಳು; ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇತ್ಯಾದಿಗಳನ್ನು ಬಳಸಿಕೊಂಡ ರಚನೆ ಇದು. ದೇಹ, ಪ್ರಕೃತಿ, ಮಿಥುನ(ಗಂಡು ಹೆಣ್ಣು), ಸೃಷ್ಟಿ ಇವುಗಳ ಸುತ್ತ ಇಲ್ಲಿ ಭಾವನೆ ರೂಪುಗೊಂಡಿದೆ. "ಬಿಳಿಮುಗಿಲ ಸೂರಿನಡಿ"(ಅದೇ) ಚಂದ್ರನ ಬೆಳಕು ಮಬ್ಬಾಗಿದ್ದರೂ ಭಯವೆಂಬ "ಕತ್ತಲೆಯನೋಡಿಸಲು ದೀವಟಿಗೆ ಹಿಡಿಯುವೆನು" (ಅದೇ) ಎಂಬಲ್ಲಿ ಕವಿಯ ಮನಸ್ಸಿನಲ್ಲಿ ಕಾಡುತ್ತಿರುವ ಅಭದ್ರತೆಯ ಅನಾವರಣವಿದೆ.

'ಗುರು' ಲಘುವಲ್ಲ'(ಪು. 33), 'ಪ್ರತಿಭಾನು'(ಪು. 57), ಕವಿತೆಗಳು ಕವಿಯ ಅನುಭವ ಕಥನಗಳಾಗಿವೆ. ವೃತ್ತಿ ಮತ್ತು ಪ್ರವೃತ್ತಿಗಳನ್ನು ನಿಷ್ಕಲ್ಮಶವಾಗಿ ನಿರ್ವಹಿಸುವ ಶಿಕ್ಷಕನ ಅಂತರಂಗದ ಪರಿಶುದ್ಧತೆಯನ್ನು ಪ್ರತಿಬಿಂಬಿಸಿದೆ.

**"ಮಾಡುತಕ್ಕರೆ ಕಲಿಸುತಕ್ಕರ**
**ಮನದ ದುಗುಡವನೆಲ್ಲ ಕಳೆಯುವೆ"**

ಎನ್ನುವಲ್ಲಿ ನಿರ್ಲಿಪ್ತ ಪ್ರೀತಿ ಮತ್ತು ಶ್ರದ್ಧಾಪೂರಕವಾದ ಕರ್ತವ್ಯಪ್ರಜ್ಞೆಯಿಂದ ಪಡೆಯುವ ಆತ್ಮಸುಖದ ಉಲ್ಲೇಖವಾಗಿದೆ.

'ಗೆದ್ದು ಗೆಲ್ಲದವರು'(ಪು. 34)ಕವನದಲ್ಲಿ ಯುದ್ಧದ ನಿರಾಕರಣೆಯ ಚಿತ್ರಣವಿದೆ. ಸಂಗ್ರಾಮದಿಂದ ಪಡೆದದು ಶೂನ್ಯ, ಪಡೆದವರು ಕಾಲಗರ್ಭದಲ್ಲಿ ಶೂನ್ಯ ಎನ್ನುವ ವಿವೇಕಚಿಂತನೆಯಿದೆ. ಜಗತ್ತಿನಲ್ಲಿ ಶಾಂತಿಯ ಸ್ಥಾಪನೆ, ಸಾಂಸ್ಕೃತಿಕ ಮೌಲ್ಯಗಳ ಪ್ರತಿಪಾದನೆ, ಆರೋಗ್ಯಯುತ ಸಮಾಜ ನಿರ್ಮಾಣದ ಕನಸು ಈ ಕವಿತೆಯಲ್ಲಿದೆ.

ಕಳೆದು ಹೋದ ಸಾಂಸ್ಕೃತಿಕ ಚಹರೆಯನ್ನು ಗುರುತಿಸುವ ಕಥನಕಾವ್ಯ 'ಉದರ ನಿಮಿತ್ತಂ'(ಪು. 59). ಪ್ರಜಾಪ್ರಭುತ್ವ ಕಾಲದಲ್ಲಿ ರಾಜಪ್ರಭುತ್ವದ ಸಂಕೇತಗಳನ್ನು ಹುಡುಕುವ ಸನ್ನಿವೇಶ ಈ ರಚನೆಯಲ್ಲಿದೆ.

**ನನ್ನ ಹಿರಿಯ ಊದುತಿದ್ದ ಕೋಟೆ ಮೇಲೆ ಕಹಳೆ**
**ವೈರಿಪಡೆಯ ಮುತ್ತಲದನು ತಿಳಿಸುತ್ತಿದ್ದ ಮಾಕಲೆ**
**ಶತ್ರುವನ್ನು ಗೆದ್ದ ಮೇಲೆ ವಿಜಯದ ಹೂಮಾಲೆ**
**ತೊಡಿಸೆ ಮೊಳಗುತಿತ್ತು ಕೋಟೆಯಲ್ಲಿ ರಣಕಹಳೆ**

**ಕುಲದ ಕಸುಬು ಮಾಡಿ ಜೀವ ಹೊರೆಯುತಿದ್ದರೆಲ್ಲ**
**ಕಾಲ ಹಕ್ಕಿ ಕುಕ್ಕಿ ಬದುಕ ಕಿತ್ತು ಹೋಯಿತಲ್ಲ**
**ಕಾಡು ದಾರಿಯಲ್ಲಿಯೂ ನಾವ್ ಹಾದಿ ಮರೆಯಲಿಲ್ಲ**
**ಕನಸ ಮರಳ ರಾಶಿಯಲ್ಲಿ ಬೆಳೆಯು ಬೆಳೆಯಲಿಲ್ಲ**

**ಉದರದಲ್ಲಿ ಬೆಂಕಿ ಸುಡುತಲಿಹುದು ನನ್ನ ತನುವು**
**ಮೊಳಗಬೇಕು ತಣಿಯಲದು ಕಹಳೆಯ ನಿನಾದವು**
**ಮದುವೆ ಜಾತ್ರೆ ಉತ್ಸವದಲಿ ಕೊಂಬ ನಾನು ಊದುವೆ**
**ನಾಡ ಭವ್ಯ ಸಂಸ್ಕೃತಿಯನು ಜಗದಗಲ ಸಾರುವೆ.**

ಲಯ ಬದ್ಧವಾಗಿ ಓದಿಸಿಕೊಂಡು ಹೋಗುವ ಈ ಕವನ ಅಂತ್ಯಪ್ರಾಸದಿಂದ ಕೂಡಿರುವುದರಿಂದ ಕವಿಗಿರುವ ಛಂದಸ್ಸಿನ ಅಂತಃಪ್ರಜ್ಞೆಯನ್ನು ಶ್ಲಾಘಿಸಲೇಬೇಕು. ಇದೇ ಮಾದರಿಯ ಓದಿನ ಓಘಕ್ಕೆ ನಿಲುಕುವ ಅನೇಕ ರಚನೆಗಳು ಈ ಕವನ ಸಂಕಲನದಲ್ಲಿದೆ.

ನನ್ನ ವಿದ್ಯಾ ಗುರುಗಳಾದ ಡಾ. ಮಹೇಶ್ವರಿ ಯು. ಇವರ ಮುನ್ನುಡಿ "ಸಂಕಲನಕ್ಕೆ 'ಸವೆದ ಹಾದಿಯ ಪಯಣ' ಎಂದು ಶೀರ್ಷಿಕೆಯನ್ನು ಕೊಡುವ ಮೂಲಕ ಹಿರಿಯರು ಹರಸಿದ ಹೆದ್ದಾರಿಯ ಕುರಿತು ಅವರು ವಿನಮ್ರತೆಯನ್ನು ಮೆರೆದಿದ್ದಾರೆ. ಬೆಳೆಯುವ ಕವಿಗೆ ಕಾವ್ಯಪರಂಪರೆಯ ಸತ್ವದ ಬಗ್ಗೆ ಅರಿವಿರಬೇಕು. ಅಂತಹ ಓದು ಶಬ್ದ ಭಂಡಾರವನ್ನು ವಿಪುಲಗೊಳಿಸುವುದರ ಜೊತೆಗೆ ಕಾವ್ಯಸಂವೇದನೆಯನ್ನು ಸೂಕ್ಷ್ಮಗೊಳಿಸುತ್ತದೆ. ಹಾಗಾಗಿಯೇ ಬಲ್ಲಾಳರ ಕವನಗಳು ಶಬ್ದದಾರಿದ್ರ್ಯದಿಂದ ಸೊರಗುವುದಿಲ್ಲ. ಪದ್ಯದ ಲಯದಲ್ಲಿ ಕವನದ ಹೆಣಿಗೆ ಅವರಿಗೆ ಸುಲಲಿತವಾಗಿ ಒಲಿದಿದೆ. ಪ್ರಾಸದ ವಿಲಾಸವನ್ನು ಬಹುಮಟ್ಟಿಗೆ ಸಹಜಸುಲಭವಾಗಿ ಅವರು ಕರಗತ ಮಾಡಿಕೊಂಡಿದ್ದಾರೆ." (ಪು. 4) ಎಂಬ ಮಾತನ್ನು ಉಲ್ಲೇಖಿಸುತ್ತಾ

ದಿವಾಕರ ಬಲ್ಲಾಳರು ಮುಂದಿನ ದಿನಗಳಲ್ಲಿ ಸಾಹಿತ್ಯದ ಹೊಸ ಹಾದಿಯಲ್ಲಿ ಸಾಗಿ ಕಾಸರಗೋಡಿನ ಕನ್ನಡಭಾಷಾ ಪ್ರಜ್ಞೆಗೆ ದಣಿವಿರದ ಧ್ವನಿಯಾಗಿ ಮುನ್ನಡೆಯುವಂತಾಗಲಿ.

**ಪರಾಮರ್ಶನ ಗ್ರಂಥಗಳು:**


1. ಬಲ್ಲಾಳ್ ಎ.ಬಿ., (2023), ಸವೆದ ಹಾದಿಯ ಪಯಣ, ಕಲಾಶ್ರೀ, ಮಂಗಳೂರು.
2. ಧನಂಜಯ ಕುಂಬ್ಳೆ, ಆನಂದ ಯಂ. ಕಿದೂರು (ಸಂ), (2022), ಪಾವಂಜೆ ಗುರುರಾಯರು ಸಂಪಾದಿಸಿರುವ ಕನಕದಾಸರ ಕೀರ್ತನೆಗಳು, ಕನಕದಾಸ ಅಧ್ಯಯನ ಪೀಠ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3. ಬಸವರಾಜ ಸಬರದ, (2003), ಸಮಗ್ರ ದಾಸ ಸಾಹಿತ್ಯ: ಸಂಪುಟ–3; ಭಾಗ–2; ಪುರಂದರ ದಾಸರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.